ಆ) ಹಾಗಿದ್ದಲ್ಲಿ ಇವುಗಳನ್ನು ಎಂದಿನಿಂದ ಮೇಲ್ದರ್ಜೆಗೇರಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಎರಡು ತಿಂಗಳಿಗೊಮ್ಮೆ ನೀಡುತ್ತಿರುವ ವಿದ್ಯುಚ್ಛಕ್ತಿ ಬಿಲ್ ಪದ್ಧತಿಯನ್ನು ರದ್ದುಗೊಳಿಸುವ ಬಗ್ಗೆ

323 (495) ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈಗ ವಿದ್ಯುಚ್ಛಕ್ತಿ ಬಿಲ್ಲನ್ನು ಎರಡು ತಿಂಗಳಿಗೊಮ್ಮೆ ಮಾಪಕವನ್ನು ನೋಡಿ ನೀಡುವ ವ್ಯವಸ್ಥೆ ಇದ್ದು, ಈ ವ್ಯವಸ್ಥೆ ಜಾರಿಗೊಳಿಸಲು ಕಾರಣ ಗಳೇನು;

ಆ) ಈ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ವ್ಯವಸ್ಥೆಯನ್ನು ಬದಲಿಸಿ ಮೊದಲಿನ ಪದ್ದತಿಯಂತೆ, ತಿಂಗಳಿಗೊಮ್ಮೆ ಬಿಲ್ಲು ಓದುವ ವ್ಯವಸ್ಥೆ ಜಾರಿಗೆ ತರಲು ಸರ್ಕಾರ ಪುನರ್ ಪರಿಶೀಲಿಸುವ ಉದ್ದೇಶ ಹೊಂದಿದೆಯೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಮಂಡಳಿಯಲ್ಲಿ ಗೃಹಬಳಕೆ ದೀಪಕ್ಕೆ ಬಳಸುವ ವಿದ್ಯುತ್ತನ್ನು ಎರಡು ತಿಂಗಳಿಗೊಮ್ಮೆ ಮಾಪಕ ಓದಿ ಬಿಲ್ಲನ್ನು ನೀಡುವ ವ್ಯವಸ್ಥೆಯು ಈಗಾಗಲೇ 1990ನೇ ಸಾಲಿನಿಂದಲೇ ಜಾರಿಯಲ್ಲಿರುವುದು. ಇದೇವ್ಯವಸ್ಥೆಯನ್ನುಇತ್ತೀಚಿನ ವರ್ಷದಲ್ಲಿ, ಸರ್ವ ವಿದ್ಯುತ್ ಗೃಹಬಳಕೆ(ಎ. ಇ.ಹೆಚ್) ಮತ್ತು ವಾಣಿಜ್ಯ ವಿದ್ಯುತ್ ಬಳಕೆಗೂ ಸಹ ರಾಜ್ಯದ ಕೆಲವು ನಗರ : ಪಟ್ಟಣಗಳಲ್ಲಿ ಮಾತ್ರ ಜಾರಿಗೊಳಿಸಲಾಗಿದೆ. ಮಂಡಳಿಯಲ್ಲಿ ಮೀಟರ ರೀಡರ್‌ಗಳ ಹಾಗೂ ಲೆಡ್ಜರ್ ಕ್ಲಾರ್ಕ್‌ಗಳ ಕೊರತೆ, ದಿನೇ ದಿನೇ ಹೆಚ್ಚುತ್ತಿರುವ ವಿದ್ಯುತ್ ಗ್ರಾಹಕರ ಸಂಖ್ಯೆ, ಅಲ್ಲದೆಮಂಡಳಿಯ ದುರ್ಬಲ ಆರ್ಥಿಕ ಪರಿಸ್ಥಿತಿ ಮುಂತಾದ ಕಾರಣಗಳಿಂದಾಗಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

ಆ) ಮೇಲೆ ತಿಳಿಸಿದ ವ್ಯವಸ್ಥೆಯಿಂದ ವಿದ್ಯುತ್ ಗ್ರಾಹಕರಿಗೆಯಾವುದೇ ರೀತಿಯ ತೊಂದರೆಯಾಗ ದಂತೆ ಜಾಗ್ರತೆವಹಿಸಲಾಗಿದೆ. ವಿದ್ಯುತ್‌ಮಾಪಕವನ್ನು ಎರಡು ತಿಂಗಳಿಗೊಮ್ಮೆ ಓದಿದರು ಸಹ, ಗ್ರಾಹಕರು ತಿಂಗಳಿಗೊಮ್ಮೆವಿದ್ಯುತ್ ಬಳಕೆಹಣವನ್ನು ಕಟ್ಟಲು ಅವಕಾಶಮಾಡಿಕೊಡಲಾಗಿದೆ. ಗ್ರಾಹಕರು ಒಮ್ಮೆಲೇ ಎರಡು ತಿಂಗಳ ಹಣವನ್ನುಕಟ್ಟುವ ಪ್ರಮೇಯವಿರುವುದಿಲ್ಲ.

ಇ) ಮೀಟರ್ ರೀಡರ್‌ಗಳು ಹಾಗೂ ಲೆಡ್ಜರ್ ಕ್ಲಾರ್ಕ್‌ಗಳಅಭಾವವಿರುವುದರಿಂದ ಈವ್ಯವಸ್ಥೆಯನ್ನುಜಾರಿಗೊಳಿಸಲಾಗಿರುತ್ತದೆ. ಸಿಬ್ಬಂದಿಯ ಕೊರತೆಯುವಿಚಾರಣೆಯಾದಲ್ಲಿ ಈ ವಿಚಾರವನ್ನು ಪುನರ್ ಪರಿಶೀಲಿಸಬಹುದಾಗಿದೆ.